# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು – 572 103

ದೂರವಾಣಿ : 0816-2254546 0816-2255596, 0816-2255597 ಫ್ಯಾಕ್ಸ್ : 0816-2270719


ಸಂಖ್ಯೆ: ತುವಿ:ಶೈವಿ:PG:2022-23:/3430 ದಿನಾಂಕ: 29.09.2022

## ಅಧಿಸೂಚನೆ

ವಿಷಯ: Soft Skills Values and Ethics–OEP ಪತ್ರಿಕೆಯನ್ನು UUCMSನಲ್ಲಿ ಅಳವಡಿಸಿರುವ ಕುರಿತು.

ಉಲ್ಲೇಖ : 1) ಸಂಯೋಜಿತ ಕಾಲೇಜುಗಳ ಕೆಲವು ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಷಯದ ಮುಖ್ಯಸ್ಥರುಗಳು ಸಲ್ಲಿಸಿರುವ ಮನವಿ ದಿನಾಂಕ: 06.09.2022

2) ಅಧ್ಯಕ್ಷರು, ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ಮಂಡಳಿ ಇವರ ಪತ್ರ ದಿನಾಂಕ:14.09.2022

3) ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 29.09.2022 (ಕಂಡಿಕೆ:372 ಪುಟ ಸಂಖ್ಯೆ:89)

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಕೆಲವು ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಷಯದ ಮುಖ್ಯಸ್ಥರುಗಳು ಸೇರಿ ಮನವಿ ಸಲ್ಲಿಸಿದ್ದು, ಪ್ರತಿ ವರ್ಷದಂತೆ ಎಂ.ಕಾಂ. ದ್ವಿತೀಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ OEP ವಿಷಯ Soft Skills Values and Ethics ಪಠ್ಯ ಕ್ರಮವಿದ್ದು, ಈ ವರ್ಷದ UUCMSನ ಲಾಗಿನ್‌ನಲ್ಲಿ ಸದರಿ ವಿಷಯವು ನಮುದಾಗಿಲ್ಲ. ಪ್ರಸ್ತುತ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಈ ವಿಷಯವನ್ನೇ ಬೋಧಿಸುತ್ತಿದ್ದು, ಶೇಕಡಾ 75 ರಷ್ಟು ಪಠ್ಯಕ್ರಮ ಮುಗಿದಿದೆ. ಆದಕಾರಣ, ಈ ವರ್ಷವೂ ಸಹ Soft Skills Values and Ethics ವಿಷಯವನ್ನೇ UUCMS ವೆಬ್‌ಸೈಟ್‌ನಲ್ಲಿ ನಮೂದು ಮಾಡಿಕೊಳ್ಳಬೇಕೆಂದು ಕೋರಿರುತ್ತಾರೆ.

ಸದರಿ ಮನವಿಯ ಕುರಿತು ಉಲ್ಲೇಖ(2)ರಲ್ಲಿನ ಅಧ್ಯಕ್ಷರು, ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ಮಂಡಳಿ ಇವರ ಸಮ್ಮತಿಯಂತೆ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯನ್ನು ಪರಿಗಣಿಸಿ ಹಾಗೂ ಮಾನ್ಯ ಕುಲಪತಿಯವರ ನಿರ್ದೇಶನದಂತೆ Soft Skills Values and Ethics–OEP ಪತ್ರಿಕೆಯನ್ನು UUCMSನಲ್ಲಿ ಅಳವಡಿಸಲಾಗಿರುತ್ತದೆ.

ಆದೇಶದ ಮೇರೆಗೆ

Mangalakumari N

ಉಪಕುಲಸಚಿವರು

ಉಪಕುಲ ಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾಲಯ
ತುಮಕೂರು

| ಕರಡು ಪತ್ರವು ಮಾನ್ಯ ಕುಲಸಚಿವರಿಂದ ಅನುಮೋದಿಸಲ್ಪಟ್ಟಿದೆ. |
|---|

ಗೆ,

1. ಅಧ್ಯಕ್ಷರು / ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಘಟಕ ಹಾಗೂ ಸಂಯೋಜಿತ ಸ್ನಾತಕೋತ್ತರ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. UUCMS ನೋಡೆಲ್ ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
4. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
5. ಕಚೇರಿ ಪ್ರತಿ.

e:\pg backup\18.1.2022\shivamurthy\sangeetha\new folder\pg kan ltrs 2021-22.docx